# ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

೨ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01.

**ದಿನಾಂಕ:28.10.2015ರಂದು ಬೆಳಗ್ಗೆ 11.00 ಗಂಟೆಗೆ ನಿಗಮದ ಕೇಂದ್ರ ಕಚೇರಿಯಲ್ಲಿರುವ ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ನಡೆದ ನಿಗಮದ 209ನೇ ನಿರ್ದೇಶಕರ ಮಂಡಳ ಸಭೆಯ ನಡವಳಗಳು:**

**ಹಾಜರಾತಿ:**

| ಹೆಸರು ಮತ್ತು ಪದನಾಮ | |
|---|---|
| ಕುಮಾರಿ ಮಲ್ಲಾಜಮ್ಮ,<br>ಮಾನ್ಯ ಅಧ್ಯಕ್ಷರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | ಅಧ್ಯಕ್ಷರು |
| ಶ್ರೀ ಗಂಗಾರಾಮ್ ಬಢೇರಿಯಾ, ಭಾ.ಆ.ಸೇ.,<br>ಸರ್ಕಾರದ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ,<br>ಕರ್ನಾಟಕ ಸರ್ಕಾರ | ಸದಸ್ಯರು |
| ಶ್ರೀ.ಕೆ.ಸಿ.ಶ್ರೀರಾಮಯ್ಯ, ಕ.ಆ.ಸೇ., (ಎಸ್‌ಟಿಎಸ್)<br>ವ್ಯವಸ್ಥಾಪಕ ನಿರ್ದೇಶಕರು<br>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | ಸದಸ್ಯ ಕಾರ್ಯದರ್ಶಿ |
| ಶ್ರೀ ರಾಮಚಂದ್ರಯ್ಯ,<br>ಸರ್ಕಾರದ ಉಪ ಕಾರ್ಯದರ್ಶಿಗಳು (ಕಲ್ಯಾಣ)<br>ಆರ್ಥಿಕ ಇಲಾಖೆ | ಸದಸ್ಯರು |
| ಶ್ರೀ ಭೋಜ್ಯನಾಯಕ್<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತ | ಸದಸ್ಯರು |

**ಗೈರು ಹಾಜರಿ:**

| | |
|---|---|
| ಶ್ರೀಮತಿ ಎಂ.ವಿ. ಸಾವಿತ್ರಿ, ಭಾ.ಆ.ಸೇ.,<br>ಆಯುಕ್ತರು,<br>ಸಮಾಜ ಕಲ್ಯಾಣ ಇಲಾಖೆ, | ಸದಸ್ಯರು |
| ಶ್ರೀಮತಿ ಎಲ್. ರಾಜೇಶ್ವರಿ<br>ಉಪ ಕಾರ್ಯದರ್ಶಿಗಳು,<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ | ಸದಸ್ಯರು |
| ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು<br>ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ಭಾರತ ಸರ್ಕಾರ, ನವದೆಹಲಿ | ಸದಸ್ಯರು |
| ನಿರ್ದೇಶಕರು,<br>ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ,<br>ಭಾರತ ಸರ್ಕಾರ, ನವದೆಹಲಿ | ಸದಸ್ಯರು |

ವ್ಯವಸ್ಥಾಪಕ ನಿರ್ದೇಶಕರು ನಿಗಮದ ಮಾನ್ಯ ಅಧ್ಯಕ್ಷರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಮತ್ತು ನಿರ್ದೇಶಕರ ಮಂಡಳಿಯ ಇತರೆ ಸದಸ್ಯರನ್ನು ಸ್ವಾಗತಿಸಿದರು. ಸಭೆಗೆ ಕೋರಂ ಇರುವುದನ್ನು ಖಾತರಿಪಡಿಸಿಕೊಂಡ ನಂತರ ಸಭೆ ನಡೆಸಬಹುದೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲಾಯಿತು. ೨೦೯ನೇ ಆಡಳಿತ ಮಂಡಳಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ವ್ಯವಸ್ಥಾಪಕ ನಿರ್ದೇಶಕರು ನಿಗಮದ ಮಾನ್ಯ ಅಧ್ಯಕ್ಷರನ್ನು ಕೋರಿದರು. ೨೦೯ನೇ ಆಡಳಿತ ಮಂಡಳಿ ಸಭೆಯ ವಿಷಯವಾರು ನಡವಳಿ ಈ ಕೆಳಗಿನಂತಿದೆ.

**ವಿಷಯ ಸಂಖ್ಯೆ: ೦1: ೨೦೮ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿ ಅಂಗೀಕರಿಸುವ ಕುರಿತು.**

* * * * *

ದಿನಾಂಕ:26.08.2015 ರಂದು ನಡೆದ 207ನೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ತೆಗೆದುಕೊಂಡ ವಿಷಯವಾರು ತೀರ್ಮಾನಗಳ ನಡವಳಿಯನ್ನು ಸರ್ವ ಸದಸ್ಯರಿಗೂ ಕಳುಹಿಸಲಾಗಿತ್ತು. ಯಾವುದೇ ನಿರ್ದೇಶಕರುಗಳಿಂದ ಸದರಿ ನಡವಳಿಯ ಬಗ್ಗೆ ವ್ಯತಿರಿಕ್ತ ಅಭಿಪ್ರಾಯಗಳು ಬಂದಿರುವುದಿಲ್ಲವೆಂಬುದನ್ನು ಸಭೆಯ ಗಮನಕ್ಕೆ ತರಲಾಯಿತು ಮತ್ತು ನಡವಳಿಯನ್ನು ಯಥಾವತ್ತಾಗಿ ಅಂಗೀಕರಿಸುವ ಬಗ್ಗೆ ಸಭೆಯನ್ನು ಕೋರಲಾಯಿತು.

**ನಿರ್ಣಯ: ನಿರ್ದೇಶಕರ ಮಂಡಳಿ ನಿರ್ದೇಶಕರಿಂದ ವ್ಯತಿರಿಕ್ತ ಅಭಿಪ್ರಾಯಗಳು ಬಾರದ ಕಾರಣ, ನಡವಳಿಯನ್ನು ಯಥಾವತ್ತಾಗಿ ಅಂಗೀಕರಿಸಿ ಸ್ಥಿರೀಕರಿಸಲು ಸಭೆಯು ನಿರ್ಣಯಿಸಿತು.**

**ವಿಷಯ ಸಂಖ್ಯೆ:2: ನಿಗಮದ 207 ಮತ್ತು 208ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿ**

207 ಮತ್ತು 208ನೇ ನಿರ್ದೇಶಕರ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಸಭೆಗೆ ವಿವರಿಸಲಾಯಿತು. ಅನುಸರಣಾ ವರದಿಯನ್ನು ಸಭೆಯು ಅವಗಾಹಿಸಿ ಅಂಗೀಕರಿಸಿತು.

**ವಿಷಯ ಸಂಖ್ಯೆ: ೦3 : ನಿಗಮದಲ್ಲಿ ಮೆ:ಕಿಯೋನಿಕ್ಸ್ ಸಂಸ್ಥೆ ಮೂಲಕ ಹೊರ ಮೂಲ ಸೇವೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳನ್ನು ಸಂಭಾವೆಯನ್ನು ಪರಿಷ್ಕರಿಸುವ ಬಗ್ಗೆ**

ನಿಗಮದಲ್ಲಿ ಖಾಲಿ ಇರುವ 'ಸಿ' ಮತ್ತು 'ಡಿ' ದರ್ಜೆಯ ಸಿಬ್ಬಂದಿಗಳ ಹುದ್ದೆಗಳಿಗೆ ನೇರ ನೇಮಕಾತಿಯಾಗದೇ ಇರುವುದರಿಂದ ಸಿಬ್ಬಂದಿಯ ಕೊರತೆಯನ್ನು ಸರಿದೂಗಿಸಲು ಹಾಗೂ ನಿಗಮದ ಯೋಜನೆಗಳನ್ನು ಸುಗಮವಾಗಿ ಅನುಷ್ಟಾನಗೊಳಿಸಲು 'ಸಿ' ಮತ್ತು 'ಡಿ' ದರ್ಜೆಯ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1990ರ ಕಲಂ 4(ಜಿ)ರಡಿಯಲ್ಲಿ ವಿನಾಯಿತಿ ಇರುವ ಮೆ:ಕಿಯೋನಿಕ್ಸ್ ಸಂಸ್ಥೆಯಿಂದ ಪಡೆಯಲಾಗಿರುತ್ತದೆ. ಈ ಹಿಂದೆ ದಿನಾಂಕ:01.10.2014ರಂದು ಸದರಿ ಅಭ್ಯರ್ಥಿಗಳಿಗೆ ನೀಡುತ್ತಿರುವ ಸಂಭಾವೆಯನ್ನು ಪರಿಷ್ಕರಿಸಲಾಗಿತ್ತು. ಸದರಿ ಅಭ್ಯರ್ಥಿಗಳ ಸಂಭಾವನೆಯನ್ನು ಕನಿಷ್ಟ ವೇತನ ಕಾಯ್ದೆಯಡಿ ಪರಿಷ್ಕರಿಸಬೇಕಾಗುತ್ತದೆ.

ನಿಗಮದಲ್ಲಿ ಮೆ:ಕಿಯೋನಿಕ್ಸ್ ಸಂಸ್ಥೆಯಿಂದ ಪಡೆಯಲಾಗಿರುವ ಹೊರ ಮೂಲ ಅಭ್ಯರ್ಥಿಗಳಿಗೂ ಸಹ ಕಾರ್ಮಿಕ ಇಲಾಖೆಯ ಕನಿಷ್ಟ ವೇತನ ಕಾಯ್ದೆಯಂತೆ ಸಂಭಾವನೆ ಪರಿಷ್ಕರಿಸಲು ಮೆ:ಕಿಯೋನಿಕ್ಸ್ ಸಂಸ್ಥೆಯವರು ಸಲ್ಲಿಸಿರುವ ಪ್ರಸ್ತಾವನೆ ಮತ್ತು ಅದರ ಪ್ರಕಾರ ತಗಲುವ ವೆಚ್ಚದ ವಿವರಗಳನ್ನು ಸಭೆಯ ಗಮನಕ್ಕೆ ತರಲಾಯಿತು.

| ಕ್ರ. ಸಂ | ಹುದ್ದೆ | ಹೊರ ಮೂಲ ಅಭ್ಯರ್ಥಿಗಳ ಸಂಭಾವನೆ ವಿವರ | | | | | | |
|---|---|---|---|---|---|---|---|---|
| | | ಸಂಖ್ಯೆ | ಪ್ರಸ್ತುತ ಸಂಭಾವನೆ | ಪರಿಷ್ಕೃತ ಸಂಭಾವನೆ | ವ್ಯತ್ಯಾಸ | ಮಾಹೆಯಾನ ತಗಲುವ ವೆಚ್ಚ | | |
| | | | | | | ಪ್ರಸ್ತುತ | ಪರಿಷ್ಕೃತ | ವ್ಯತ್ಯಾಸ |
| 1 | ಪ್ರಥಮ ದರ್ಜೆ ಸಹಾಯಕರು/ ಲೆಕ್ಕ ಸಹಾಯಕರು | 20 | 11,969 | 13,735 | 1,766 | 239380 | 274700 | 35320 |
| 2 | ದ್ವಿತೀಯ ದರ್ಜೆ ಸಹಾಯಕರು/ ಟೈಪಿಸ್ಟ್ ಕಂ ಕಂಪ್ಯೂಟರ್ ಆಪರೇಟರ್ | 58 | 11,839 | 13,477 | 1,638 | 686662 | 781666 | 95004 |
| 3 | ವಾಹನ ಚಾಲಕರು | 11 | 10,934 | 12,652 | 1,718 | 120274 | 139172 | 18898 |
| 4 | ದಲಾಯಿತರು | 18 | 10,675 | 11,964 | 1,289 | 192150 | 215352 | 23202 |
| | ಒಟ್ಟು | 107 | | | | 1238466 | 1410890 | 172424 |

ಮೇಲೆ ತಿಳಿಸಿರುವಂತೆ ಮೆ:ಕಿಯೋನಿಕ್ಸ್ ಸಂಸ್ಥೆಯ ಮೂಲಕ ಹೊರ ಮೂಲ ಸೇವೆ ಆಧಾರದಲ್ಲಿ ಪಡೆದಿರುವ 107 ವಿವಿಧ ವೃಂದಗಳ ಅಭ್ಯರ್ಥಿಗಳಿಗೆ ಸಂಭಾವನೆಯನ್ನು ಪರಿಷ್ಕರಿಸಲು ಹೆಚ್ಚುವರಿಯಾಗಿ ವಾರ್ಷಿಕ ರೂ:20,69,088.00ಗಳಾಗಲಿದೆ ಎಂಬ ವಿಷಯವನ್ನು ನಿರ್ದೇಶಕ ಮಂಡಳ ಸಭೆಯು ಪರಿಶೀಲಿಸಿ ಈ ಪ್ರಸ್ತಾವನೆಯನ್ನು ಅನುಮೋದಿಸಬಹುದೆಂಬ ಅಭಿಪ್ರಾಯಕ್ಕೆ ಬಂದಿತು. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರು ಕಿಯೋನಿಕ್ಸ್ ಸಂಸ್ಥೆಯು ಸೇವಾ ಶುಲ್ಕ ಹೆಚ್ಚು ವಿಧಿಸುತ್ತಾರೆಂದು ತಿಳಿಸಿ ಈ ಮೊತ್ತವನ್ನು ಕಡಿಮೆ ಮಾಡುವ ಬಗ್ಗೆ ಮೆ: ಕಿಯೋನಿಕ್ಸ್ ಸಂಸ್ಥೆಯ ಜೊತೆ ಸಂಧಾನ ಮಾಡಲು ಸೂಚಿಸಿದರು.

**ನಿರ್ಣಯ: ನಿಗಮದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಮೆ: ಕಿಯೋನಿಕ್ಸ್ ಸಂಸ್ಥೆ ಮೂಲಕ ಬಂದು ಕಾರ್ಯನಿರ್ವಹಿಸುತ್ತಿರುವ 107 ಅಭ್ಯರ್ಥಿಗಳಿಗೆ ಕನಿಷ್ಠ ವೇತನ ಕಾಯಿದೆಯಡಿ ಪರಿಷ್ಕರಿಸಿರುವ ಸಂಭಾವನೆಯನ್ನು ನೀಡಲು ಸಭೆಯು ಒಪ್ಪಿಗೆ ಸೂಚಿಸಿತು. ಮುಂದುವರೆದು, ಸೇವಾ ಶುಲ್ಕಗಳು ಹೆಚ್ಚಿರುವ ಬಗ್ಗೆ ಮೆ: ಕಿಯೋನಿಕ್ಸ್ ಸಂಸ್ಥೆಯವರೊಡನೆ ಚರ್ಚಿಸಿ ಸಂಧಾನದ ಮೂಲಕ ಸೇವಾ ಶುಲ್ಕವನ್ನು ಕಡಿಮೆ ಮಾಡಿ ಆ ವಿಷಯವನ್ನು ಮುಂದಿನ ನಿರ್ದೇಶಕರ ಮಂಡಳ ಸಭೆಯ ಮುಂದೆ ಮಂಡಿಸಲು ಸಭೆಯು ಸೂಚಿಸಿತು.**

**ವಿಷಯ ಸಂಖ್ಯೆ: 04 : ನಿಗಮದಲ್ಲಿ ಮಂಜೂರಾಗಿರುವ ವಿವಿಧ ವೃಂದಗಳ ಹುದ್ದೆಗಳನ್ನು ಕೇಂದ್ರ ಕಛೇರಿ, ವಿಭಾಗೀಯ ಕಛೇರಿ ಹಾಗೂ ಜಿಲ್ಲಾ ಕಛೇರಿಗಳಿಗೆ ಹಂಚಿಕೆ ಮಾಡುವ ಬಗ್ಗೆ.**

ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ದಿನಾಂಕ:18.09.2008ರವರೆಗೆ 543 ವಿವಿಧ ಹುದ್ದೆಗಳನ್ನು ಸೃಜಿಸಲಾಗಿತ್ತು. ಸರ್ಕಾರದ ಆದೇಶ ಸಂಖ್ಯೆ:ಸಕಇ/53/ಎಸ್‌ಡಿಸಿ/07, ದಿನಾಂಕ:18.09.008ರಲ್ಲಿ ಹೊಸದಾಗಿ ಪ್ರಾರಂಭವಾದ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಕ್ಕೆ 171 ವಿವಿಧ ಹುದ್ದೆಗಳನ್ನು ವರ್ಗಾಯಿಸಲಾಗಿರುತ್ತದೆ. ಇದರಿಂದಾಗಿ ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ 372 ಮಂಜೂರಾದ ಹುದ್ದೆಗಳು ಇರುತ್ತವೆ. ಸರ್ಕಾರದ ಆದೇಶ ಸಂಖ್ಯೆ:ಸಕಇ/36/ಎಸ್‌ಡಿಸಿ/2010,ದಿನಾಂಕ:05.08.2010ದಲ್ಲಿ ಹೊಸದಾಗಿ ಪ್ರಾರಂಭವಾದ ಯಾದಗಿರಿ ಜಿಲ್ಲೆಗೆ ಜಿಲ್ಲಾ ವ್ಯವಸ್ಥಾಪಕರ ಕಛೇರಿಯನ್ನು ಪ್ರಾರಂಭಿಸಲು ಮಂಜೂರಾತಿ ನೀಡಿ 07 ವಿವಿಧ ವೃಂದಗಳ ಹುದ್ದೆಗಳನ್ನು ಹೊಸದಾಗಿ ಸೃಜಿಸಲಾಗಿರುತ್ತದೆ ಹಾಗೂ ಸರ್ಕಾರಿ ಆದೇಶ

ಸಂಖ್ಯೆ:ಸಕಇ/136/ಎಸ್‌ಡಿಸಿ/2012, ದಿನಾಂಕ:21.09.2012ರಲ್ಲಿ 02 ಉಪ ಪ್ರಧಾನ ವ್ಯವಸ್ಥಾಪಕರ ಹುದ್ದೆಗಳನ್ನು ಸೃಜಿಸಿ ಮಂಜೂರಾತಿ ನೀಡಲಾಗಿದೆ. ಒಟ್ಟಾರೆ ಪ್ರಸ್ತುತ ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಒಟ್ಟು 381 ವಿವಿಧ ವೃಂದಗಳ ಹುದ್ದೆಗಳು ಇರುತ್ತವೆ.

ಅದರಂತೆ ಸದರಿ 381 ವಿವಿಧ ವೃಂದಗಳ ಹುದ್ದೆಗಳಲ್ಲಿ ಕೇಂದ್ರ ಕಛೇರಿಗೆ 68 ಹುದ್ದೆಗಳು, 4 ವಿಭಾಗೀಯ ಕಛೇರಿಗಳಿಗೆ 28 ಹುದ್ದೆಗಳು ಹಾಗೂ 30 ಜಿಲ್ಲಾ ಕಛೇರಿಗಳಿಗೆ 285 ಹುದ್ದೆಗಳನ್ನು ಅನುಕ್ರಮವಾಗಿ ಹಂಚಿಕೆ ಮಾಡಲಾದ ಅನುಬಂಧ-01, 02 ಮತ್ತು 03ರಲ್ಲಿನ ವಿವರಗಳನ್ನು ಸಭೆಗೆ ವಿವರಿಸಲಾಯಿತು.

ರಾಜ್ಯದಲ್ಲಿರುವ 30 ಜಿಲ್ಲೆ ಹಾಗೂ 177 ತಾಲ್ಲೂಕುಗಳಲ್ಲಿನ ಪರಿಶಿಷ್ಟ ಜಾತಿಯವರ ಜನಸಂಖ್ಯೆ ಆಧರಿಸಿ ಆಯವ್ಯಯದಲ್ಲಿ ವರ್ಷಂಪ್ರತಿ ಹೆಚ್ಚಿನ ಅನುದಾನವನ್ನು ಕಾರ್ಯಕ್ರಮಗಳ ಅನುಷ್ಠಾನಕ್ಕೆ ನೀಡುತ್ತಿರುವುದರಿಂದ ಹಾಗೂ ಪರಿಶಿಷ್ಟ ಜಾತಿಗೆ ಸೇರಿದ ಅರ್ಹ ಫಲಾಪೇಕ್ಷಿಗಳ ನಿರೀಕ್ಷೆ ಮತ್ತು ಬೇಡಿಕೆಯಂತೆ ನಿಗಮದ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಅಧಿಕಾರಿ/ ಸಿಬ್ಬಂದಿಗಳ ಅವಶ್ಯಕತೆ ಇರುವ ಹಿನ್ನೆಲೆಯಲ್ಲಿ ವಿವಿಧ ವೃಂದದ 75 ಹುದ್ದೆಗಳನ್ನು ಹೊಸದಾಗಿ ಸೃಜಿಸಲು ದಿನಾಂಕ:06.12.2014ರಂದು ನಡೆದ ನಿಗಮದ 203ನೇ ನಿರ್ದೇಶಕರ ಮಂಡಳಿ ಸಭೆಯ ಅನುಮೋದನೆಯಂತೆ ಈ ಕಾರ್ಯಾಲಯದ ಪತ್ರ ದಿನಾಂಕ:06.07.2015ರಲ್ಲಿ ಸರ್ಕಾರದಿಂದ ಆದೇಶ ಹೊರಡಿಸಲು ಕೋರಲಾಗಿದೆ. ಎಂಬ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು ಮತ್ತು ಈ ಪ್ರಸ್ತಾವನೆಗೆ ಅನುಮೋದನೆ ಕೋರಲಾಯಿತು.

**ನಿರ್ಣಯ: ಪ್ರಸ್ತುತ ನಿಗಮದಲ್ಲಿರುವ 381 ವಿವಿಧ ವೃಂದಗಳ ಹುದ್ದೆಗಳನ್ನು ಕೇಂದ್ರ ಕಛೇರಿಗೆ, ವಿಭಾಗೀಯ ಕಛೇರಿಗೆ ಹಾಗೂ ಜಿಲ್ಲಾ ಕಛೇರಿಗಳಿಗೆ ಹಂಚಿಕೆ ಮಾಡುವ ಪ್ರಸ್ತಾವನೆಯನ್ನು ಮಂಡಳಿ ಸಭೆಯು ಅನುಬಂಧ-1, 2 ಮತ್ತು 3 ರಲ್ಲಿರುವಂತೆ ಅನುಮೋದಿಸಿತು.**

**ವಿಷಯ ಸಂಖ್ಯೆ: 05 : ನಿಗದಿತ ವೇತನ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವ ಬಗ್ಗೆ.**

ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ನಿಗದಿತ ವೇತನ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012ರನ್ವಯ ದಿನಾಂಕ:10.04.2006ರ ಅಂತ್ಯಕ್ಕೆ 10 ವರ್ಷ ಸೇವೆ ಪೂರೈಸದೇ ಇರುವ 25 ನೌಕರರು ಕೆಲಸ ನಿರ್ವಹಿಸುತ್ತಿರುವ ಹುದ್ದೆಗೆ ಸಮಾನ ವೇತನ ನೀಡಲು ಕೋರಿ ಮನವಿ ಸಲ್ಲಿಸಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು ಮತ್ತು 198ನೇ ನಿರ್ದೇಶಕರ ಮಂಡಳಿ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಸಭೆಯ ಗಮನಕ್ಕೆ ತರಲಾಯಿತು. ಈ ಬಗ್ಗೆ ಸುಧೀರ್ಘವಾಗಿ ಚರ್ಚಿಸಿದ ಮಂಡಳಿ ಸಭೆಯು ಈ ನೌಕರರು ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012ರನ್ವಯ ವಿಧಿಸಿರುವ ನಿಬಂಧನೆಗಳ ವ್ಯಾಪ್ತಿಯಲ್ಲಿ ಬರದ ಕಾರಣ ಈ ಪ್ರಸ್ತಾವನೆಯನ್ನು ಒಪ್ಪಲು ಸಾಧ್ಯವಿಲ್ಲ ಎಂಬ ನಿರ್ಣಯಕ್ಕೆ ಬಂದಿತು. ಮುಂದುವರೆದು, ಈ ಅಭ್ಯರ್ಥಿಗಳು ಪ್ರಸ್ತುತ ಪಡೆಯುತ್ತಿರುವ ನಿಗದಿತ ವೇತನವು ಅತೀ ಕಡಿಮೆ ಇರುವುದರಿಂದ ಈ ಕೆಳಗಿನಂತೆ ಪರಿಷ್ಕರಿಸಲು ತೀರ್ಮಾನಿಸಿತು.

| ಕ್ರಮ.ಸಂಖ್ಯೆ | ಹುದ್ದೆ | ಪರಿಷ್ಕೃತ ವೇತನ |
|---|---|---|
| 1 | ಬೆರಳಚ್ಚುಗಾರ | 15000 |
| 2 | ವಾಹನ ಚಾಲಕ | 15000 |
| 3 | ದಲಾಯತ | 12000 |



HBMangaum